**ದಿನಾಂಕ:25-01-2024 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ.ಆರ್ ಎಸ್ ಟಿ ವಕೀಲರಿಂದ :**

ದಾವಾ ಆಸ್ತಿಗಳನ್ನು ನನ್ನ ಗಂಡ ಮತ್ತು ಮೈದುನನ ಹೆಸರಿಗೆ ಯಾವ ದಾಖಲೆಗಳ ಆದಾರದ ಮೇಲೆ ದಾಖಲೆಗಳನ್ನು ಬದಲಾವಣೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಆ ದಾಖಲೆಗಳನ್ನು ತೆಗೆಯಿಸಿ ನೋಡಿರುವುದಿಲ್ಲ. ಆ ಎಲ್ಲಾ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ

ಹಾಜರುಪಡಿಸಿರುತ್ತೇನೆ. ನಾನು ಎಲ್ಲಾ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅತ್ತೆ ಮತ್ತು ಮಾವ ಜೀವಂತವಿದ್ದಾಗಲೇ ದಾವಾ ಆಸ್ತಿಗಳನ್ನು ನನ್ನ ಗಂಡ ಮತ್ತು ಮೈದುನನ ಹೆಸರಿಗೆ ಬದಲಾವಣೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ವಾದಿಯರ ಅನುಮತಿ ಇಲ್ಲದೇ ಹಾಗೂ ನನ್ನ ಅತ್ತೆ ಮತ್ತು ಮಾವಂದಿರಿಗೆ ಗೊತ್ತಾಗದೇ ಹಾಗೆ ನನ್ನ ಗಂಡ ಸರಕಾರದಿಂದ ಸೌಲಭ್ಯ ಪಡೆಯುವ ಉದ್ದೇಶದಿಂದ ನನ್ನ ಮತ್ತು ನನ್ನ ಮೈದುನನ ಹೆಸರಿಗೆ ದಾಖಲೆ ಬದಲಾವಣೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಇಂದಿಗೂ ಸಹ ವಾದಿಯರು ಮತ್ತು ನನ್ನ ಗಂಡ ಹಾಗೂ ನನ್ನ ಮೆದುನರವರು ಕೂಡಿಯೇ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿಯ ನಾನು ಮತ್ತು ನನ್ನ ಮೈದುನ ಮಾತ್ರ ದಾವಾ ಆಸ್ತಿಗಳಲ್ಲಿ ವಹಿವಾಟು ಮಾಡುತ್ತಿದ್ದೇವೆ ಎಂದು ಸ್ವತಃ ನುಡಿಯುತ್ತಾರೆ. ದಾವಾ ಆಸ್ತಿಗಳು ಇಂದಿಗೂ ಸಹ ನಮ್ಮ ಮತ್ತು ವಾದಿಯರ ನಡುವೆ ಹಿಸ್ಸೆ ದಿಸ್ಸೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಈ ರೀತಿ ಹಿಸ್ಸೆ ಆಗಿರುವ ವಿಚಾರ ಗೊತ್ತಿದ್ದರೂ ಸಹ ವಾದಿಯರ ಹಿಸ್ಸಾ ಹಕ್ಕನು ಕಬಳಿಸುವ ಉದ್ದೇಶದಿಂದ ಈಗಾಗಲೇ ಹಿಸ್ಸೆ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿ ವಿಪಿಸಿ ನಂಬರ 241/ಎ1 ರ ಆಸ್ತಿ ಈಗಲೂ ಸಹ ನನ್ನ ಮಾವನವರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ ಸಾಕ್ಷಿಯು ಅರ್ದ ಬಾಗದ ಆಸ್ತಿ ನನ್ನ ಹೆಸರಿನಲ್ಲಿ ಉಳಿದ ಅರ್ದ ಭಾಗದ ಆಸ್ತಿ ನನ್ನ ಮಾವನವರ ಹೆಸರಿನಲ್ಲಿದೆ ಎಂದು ಸ್ವತಃ ನುಡಿಯುತ್ತಾರೆ. ನನ್ನ ಅತ್ತೆಯವರ ಹೆಸರಿಗೆ ಸರಕಾರದಿಂದ ಜನತಾ ಮನೆ ಮಂಜೂರಾಗಿತ್ತು ಎಂದರೆ ಸರಿಯಲ್ಲ. ದಾವಾ ವಿಪಿಸಿ ನಂಬರ 241/ಎ/1 ರ ಆಸ್ತಿ ಈಗಲೂ ಸಹ ನನ್ನ ಅತ್ತೆಯ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಈ ಆಸ್ತಿ ನನ್ನ ಅತ್ತೆಗೆ ಸರಕಾರದಿಂದ ಮಂಜೂರಾಗಿರುವ ಕಾರಣ ಆಕೆಯ ಹಸರಿನಲ್ಲಿಯೇ ಖಾತಾ ಇದೆ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ 2017 ನೇ ಇಸ್ವಿಯಂದು ಸರಕಾರದಿಂದ ಮನೆ ಮಂಜೂರಾಗಿರುತ್ತದೆ. ಆ ಆಸ್ತಿಯು ಸರಕಾರದಿಂದ ಮಂಜೂರಾಗುವುದಕ್ಕಿಂತ ಮೊದಲು ನನ್ನ ಅತ್ತೆ ಮತ್ತು ಮಾವನ ಹೆಸರಿನಲ್ಲಿ ಅರ್ದ ಅರ್ದ ಆಸ್ತಿ ಇತ್ತು ಎದಂರೆ ಸರಿಯಲ್ಲ. ಆ ವಿಪಿಸಿ ಆಸ್ತಿಯನ್ನು ನನ್ನ ಗಂಡ ನನಗೆ ಬಿಟ್ಟುಕೊಟ್ಟ ಕಾರಣ ನನ್ನ ಹೆಸರಿಗೆ ಖಾತಾ ಬದಲಾವಣೆ ಮಾಡಿಸಿಕೊಂಡಿರುತ್ತೇನೆ. ನನಗೆ ನನ್ನ ಗಂಡ ನನ್ನ ಹೆಸರಿಗೆ ಬಿಟ್ಟುಕೊಡುವುದಕ್ಕಿಂತ ಮೊದಲು ಆ ಆಸ್ತಿಯು ನನ್ನ ಮಾವನವರಿಗೆ ಸೇರಿದ ಆಸ್ತಿಯಾಗಿರುತ್ತದೆ ಎಂದರೆ ಸರಿ. ಆ ಆಸ್ತಿಯನ್ನು ನನ್ನ ಮಾವನವರು ನನ್ನ ಗಂಡನಿಗೆ ಬಿಟ್ಟುಕೊಟ್ಟಿದ್ದರು. ಈ ಬಗ್ಗೆ ದಾಖಲೆಗಳನ್ನು ನಾನು ತೆಗೆಯಿಸಿ

ನೋಡಿರುತ್ತೇನೆ. ಈ ಬಗ್ಗೆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಈ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ತೆಗೆಯಿಸಿ ನೋಡಿರುವುದಿಲ್ಲ ಮತ್ತು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಆದರೂ ಸಹ ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿಪಿಸಿ ನಂಬರ 241/ಎ1 ರ ಆಸ್ತಿ ನಾನು, ನನ್ನ ಗಂಡ, ನನ್ನ ಮೆದುನ ಹಾಗೂ ವಾದಿಯರು ಕೂಡಿಯೇ ವಹಿವಾಟು ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ.

ಮಕ್ಬೂಲ ಅಹ್ಮದ ಮಿಠಾಯಿಗಾರ ರವರು ಗೊತ್ತು. ಆತ ನಮ್ಮ ಗ್ರಾಮ ಪಂಚಾಯತಿಯ ಸದಸ್ಯರಾಗಿರುತ್ತಾರೆ. ಆ ವಿಪಿಸಿ ನಂಬರ 241/ಎ1 ಅನ್ನು ನನ್ನ ಹೆಸರಿಗೆ ದಾಖಲೆ ಮಾಡಿಕೊಡುವ ಸಂದರ್ಭದಲ್ಲಿ ಮಕ್ಬೂಲ ಅಹ್ಮದ ಮಿಠಾಯಿಗಾರರವರು ಗ್ರಾಮ ಪಂಚಾಯತಿ ಸದಸ್ಯರಾಗಿದ್ದರೋ ಅಥವಾ ಇಲ್ಲವೋ ಎಂಬುದನ್ನು ನನಗೆ ಗೊತ್ತಿಲ್ಲ. ನಾನು ಮಕ್ಬೂಲ ಅಹ್ಮದ ಮಿಠಾಯಿಗಾರ ರವರಿಗೆ ಚುನಾವಣೆಯಲ್ಲಿ ಮತ ಚಲಾಯಿಸಿದ ಕಾರಣ ಅವರು ನನ್ನ ಹೆಸರಿಗೆ ದಾಖಲೆಗಳನ್ನು ಮಾಡಿಸಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಲೂ ಸಹ ದಾವಾ ಆಸ್ತಿಗಳಲ್ಲಿ ನಾನು, ನನ್ನ ಮೈದುನ ಮತ್ತು ವಾದಿಯರು ಕೂಡಿಯೇ ವಹಿವಾಟು ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಇಲ್ಲಿಯವರೆಗೂ ಸಹ ನಮ್ಮ ಕುಟುಂಬದಲ್ಲಿ ಯಾವುದೇ ಕಾನೂನುಬದ್ಧ ಹಿಸ್ಸೆ ದಿಸ್ಸೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಈ ರೀತಿ ನಮ್ಮ ಕುಟುಂಬದಲ್ಲಿ ಹಿಸ್ಸೆ ದಿಸ್ಸೆ ಆಗದೇ ಇದ್ದರೂ ಸಹ ಈಗಾಗಲೇ ಹಿಸ್ಸೆ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

:**ಮರುವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್

ಸಾಕ್ಷಿದಾರರ ಸಹಿ